# ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಉಪ ನಿರ್ದೇಶಕರು, ನಗರ ಯೋಜನಾ ವಿಭಾಗ, ಜ್ಯುಬಿಲಿ ಸರ್ಕಲ್ ಹತ್ತಿರ, ಧಾರವಾಡ

ADTP

ನಂ.ಹುಧಾಮಪಾ/51/ನ.ಯೋ/ವಿನ್ಯಾಸ ಹಸ್ತಾಂತರ/2024-25/1898/ ದಿನಾಂಕ: 20-12-2024

ವಿಷಯ:- ಧಾರವಾಡ ತಾಲೂಕ ತಡಸಿನಕೊಪ್ಪ ಗ್ರಾಮದ ರಿ.ಸ.ನಂ/ಬ್ಲಾಕ್ ನಂ:17/2 (ಕೆ.ಜಿ.ಪಿ 17/2) ನೇದ್ದರ ಕ್ಷೇತ್ರ 11 ಎಕರೆ ವಿಸ್ತೀರ್ಣದ ವಸತಿ ಉದ್ದೇಶದ ವಿನ್ಯಾಸವನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿಕೊಳ್ಳುವ ಕುರಿತು.

ಉಲ್ಲೇಖ:- 1) ಮಾನ್ಯ ಜಿಲ್ಲಾಧಿಕಾರಿಗಳ ಕರಡು ಅಧಿಕೃತ ಜ್ಞಾಪನ ಕಚೇರಿ ಪತ್ರ ಸಂಖ್ಯೆ: ಎಲ್ಎನ್ಎ/ಸಿಆರ್-239/2012-13 ದಿ:-03-11-2012

2) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಪತ್ರ ಸಂ:ಹುಧಾನಪ್ರಾ/ಪಿ.ಎಸ್/ಲೇಔಟ/28/12/802ದಿ:-06-06-2014.

3) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ವಿನ್ಯಾಸಕ್ಕೆ ಮುಕ್ತಾಯ ಪ್ರಮಾಣ ಪತ್ರ ನೀಡಿದ ಆದೇಶ ಕ್ರ.ಸಂ. ಹುಧಾನಪ್ರಾ/ಆ.ವಿ/ತಡಸಿನಕೊಪ್ಪ/ಖಾ.ವಿ/2023-24/2953 ದಿನಾಂಕ:31-10-2023.

4) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಅಂತಿಮ ವಿನ್ಯಾಸ ಆದೇಶ ಕ್ರ.ಸಂ.ಹುಧಾನಪ್ರಾ/ಯೋ.ವಿ/ವಿನ್ಯಾಸ/28/12/5126 ದಿನಾಂಕ:12-03-2024.

5) ದಿನಾಂಕ:16-08-2024 ರ ನಗರ ಯೋಜನಾ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆಯ ಹೆಚ್ಚಿನ ವಿಷಯ ಸಂಖ್ಯೆ: 04 ಠರಾವ ಸಂಖ್ಯೆ: 248.

*****

**ಪೀಠಿಕೆ**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರನ್ವಯ ಧಾರವಾಡ ತಾಲೂಕ ತಡಸಿನಕೊಪ್ಪ ಗ್ರಾಮದ ರಿ.ಸ.ನಂ/ಬ್ಲಾಕ್ ನಂ:17/2 (ಕೆ.ಜಿ.ಪಿ 17/2) ನೇದ್ದರ ಕ್ಷೇತ್ರ 11 ಎಕರೆ ವಿಸ್ತೀರ್ಣದಲ್ಲಿ ಶ್ರೀ ಜಹಾಂಗೀರ ಶೇಖ ತಂದೆ ನೋಹಾ ಶೇಖ, ಮಿಡಮ್ಯಾಕ್ ಡೆವಲಪರ್ಸ್, ಹುಬ್ಬಳ್ಳಿ ಇವರು ಮಾನ್ಯ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ:ಎಲ್ಎನ್ಎ/ಸಿಆರ್-239/2012-13 ದಿ:-03-11-2012 ರನ್ವಯ ವಸತಿ ಉದ್ದೇಶಕ್ಕಾಗಿ ಬಿನಶೇತ್ಕಿ ಆದೇಶ ಪಡೆದುಕೊಂಡಿರುತ್ತಾರೆ. ಉಲ್ಲೇಖ(2) ರನ್ವಯ ಪ್ರಾಧಿಕಾರದಿಂದ ವಸತಿ ವಿನ್ಯಾಸಕ್ಕೆ ಅನುಮೋದನೆ ನೀಡಲಾಗಿರುತ್ತದೆ. ಸದರಿ ವಿನ್ಯಾಸಕ್ಕೆ ಕಾಮಗಾರಿಗಳ ಬಗ್ಗೆ ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ತೃಪ್ತಿಕರವಾಗಿ ನಿರ್ವಹಿಸಿದ್ದು ಉಲ್ಲೇಖ (3) ಮತ್ತು (4) ರನ್ವಯ ಪ್ರಾಧಿಕಾರದ ಮುಕ್ತಾಯ ಪ್ರಮಾಣ ಮತ್ತು ಅಂತಿಮ ವಿನ್ಯಾಸ ಆದೇಶ ಪತ್ರದಲ್ಲಿ ತಿಳಿಸಿರುತ್ತಾರೆ. ವಿನ್ಯಾಸದಲ್ಲಿ ಒಟ್ಟು 169 ವಸತಿ ನಿವೇಶನಗಳು ಇರುತ್ತವೆ. ವಿನ್ಯಾಸದಲ್ಲಿ ಇರುವ ರಸ್ತೆ ಮತ್ತು ಉದ್ಯಾನವನ ಜಾಗೆಗಳು ಆಯುಕ್ತರು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಇವರ ಹೆಸರಿಗೆ ದಾಖಲಾಗಿರುತ್ತವೆ. ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್) ಇವರು ವಿದ್ಯುತ್ ಕಾಮಗಾರಿಗಳ ಬಗ್ಗೆ, ಕಾರ್ಯನಿರ್ವಾಹಕ ಅಭಿಯಂತರರು (ಸಿವ್ಹಿಲ್) ಇವರು ರಂದು ಸಿವ್ಹಿಲ್ ಕಾಮಗಾರಿಗಳ ಬಗ್ಗೆ ಮತ್ತು ನಗರ ಯೋಜನಾ ಉಪ ನಿರ್ದೇಶಕರು ಸ್ಥಳ ಪರಿಶೀಲಿಸಿ ವಿನ್ಯಾಸ ಹಸ್ತಾಂತರಿಸಿಕೊಳ್ಳಲು ಅಭಿಪ್ರಾಯ ನೀಡಿರುತ್ತಾರೆ. ಅದರಂತೆ ಅರ್ಜಿದಾರರು ರೂ.11,61,950/-ಗಳನ್ನು ದಿನಾಂಕ:06-12-2024, ರಂದು NEFT ಮುಖಾಂತರ ಪಾಲಿಕೆಯ ಖಾತೆಗೆ ಭರಣಾ ಮಾಡಿರುತ್ತಾರೆ. ಆದ್ದರಿಂದ ಸದರಿ ವಸತಿ ವಿನ್ಯಾಸವನ್ನು ಈ ಕೆಳಗಿನ ಕರಾರುಗಳಿಗೆ ಒಳಪಟ್ಟು ಹಸ್ತಾಂತರಿಸಿಕೊಳ್ಳಬಹುದಾಗಿರುತ್ತದೆ.

**ಹಸ್ತಾಂತರ ಪತ್ರ**

ಧಾರವಾಡ ತಾಲೂಕ ತಡಸಿನಕೊಪ್ಪ ಗ್ರಾಮದ ರಿ.ಸ.ನಂ/ಬ್ಲಾಕ್ ನಂ:17/2 (ಕೆ.ಜಿ.ಪಿ 17/2) ನೇದ್ದರ ಕ್ಷೇತ್ರ 11 ಎಕರೆ ವಿಸ್ತೀರ್ಣದ ಜಮೀನನ್ನು ಈ ಕೆಳಕಂಡ ಕರಾರುಗಳನ್ನು ವಿಧಿಸಿ ನಗರ ಯೋಜನಾ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಸಭೆ ಮತ್ತು ಮಹಾನಗರ ಪಾಲಿಕೆಯ ಸಾಮಾನ್ಯ ಸಭೆಯ ನಿರ್ಣಯದಂತೆ ವಸತಿ ವಿನ್ಯಾಸವನ್ನು ಮಹಾನಗರ ಪಾಲಿಕೆ ಹಸ್ತಾಂತರಿಸಿಕೊಳ್ಳಲಾಗಿದೆ.

**ಕರಾರುಗಳು:**

1. ವಿನ್ಯಾಸದಲ್ಲಿ ಬರುವ ರಸ್ತೆ, ಉದ್ಯಾನವನ ಮತ್ತು ಸೆಪ್ಟಿಕ್ ಜಾಗೆಗಳು ಆಯುಕ್ತರು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಇವರ ಹೆಸರಿಗೆ ದಾಖಲಾಗಿರುತ್ತವೆ.
2. ಸದರಿ ವಿನ್ಯಾಸದಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಿದ್ದು, ಪ್ರತಿಶತ 80% ರಷ್ಟು ಮನೆಗಳು ಬರುವವರೆಗೆ ವಿನ್ಯಾಸದ ಮಾಲೀಕರೆ ಸಂರಕ್ಷಣೆ ಮಾಡತಕ್ಕದ್ದು.
3. ಸದರಿ ವಿನ್ಯಾಸದಲ್ಲಿ ಕೊಳವೆ ಬಾವಿ ಹಾಕಿದ್ದು ಎಲ್ಲ ನಿವೇಶನದಾರರಿಗೆ ನೀರನ್ನು ಪೂರೈಸಬೇಕು. ಪ್ರತಿಶತ 80% ರಷ್ಟು ಮನೆಗಳು ಬಂದ ನಂತರ ಪಾಲಿಕೆಯು ಬೋರವೆಲ್ ಹಸ್ತಾಂತರಿಸಲು ಕೇಳಿದಾಗ ಪುಕ್ಕಟೆಯಾಗಿ ಪಂಪ್ ಸಹಿತವಾಗಿ ಹಸ್ತಾಂತರಿಸಬೇಕು.
4. ವಿನ್ಯಾಸದಲ್ಲಿ ರಸ್ತೆ ನಾಮಫಲಕ ಹಾಕಿದ್ದು,ಇವುಗಳನ್ನು ವಿನ್ಯಾಸದ ಮಾಲೀಕರು ಎಲ್ಲ ಮನೆಗಳು ಬರುವವರೆಗೂ ಸಂರಕ್ಷಣೆ ಮಾಡಬೇಕು.
5. ಸದರಿ ವಿನ್ಯಾಸದ ನಿವೇಶನದಾರರು ಒಳಚರಂಡಿ ಕೊಳವೆ ಮಾರ್ಗ ಆಗುವವರೆಗೆ ಎಲ್ಲ ನಿವೇಶನದಾರರು ವೈಯಕ್ತಿಕವಾಗಿ ಸೆಪ್ಟಿಕ್ ಟ್ಯಾಂಕ್ ಕಟ್ಟಿಸಿಕೊಳ್ಳಬೇಕು.
6. ಸದರ ಸಿವಿಲ್ ಕಾಮಗಾರಿಗಳ ಬಗ್ಗೆ ಹಾಗೂ ಇತರೆ ಕಾಮಗಾರಿಗಳ ಇತರೆ ಕಾಮಗಾರಿಗಳ ಬಗ್ಗೆ ವಿನ್ಯಾಸದ ಮಾಲೀಕರೇ ಹೊಣೆಗಾರರು. ಈ ಕುರಿತು ನಷ್ಟ ಭರ್ತಿ ಪ್ರಮಾಣ ಪತ್ರ ನೀಡತಕ್ಕದ್ದು.
7. ಸದರ ವಿನ್ಯಾಸದಲ್ಲಿನ ನಿವೇಶನದಾರರು ಯಾವುದೇ ರೀತಿಯ ಹೆಚ್ಚಿನ ಪೌರ ಸೌಲಭ್ಯಗಳನ್ನು ಕೇಳಿದಲ್ಲಿ ಅವುಗಳನ್ನು ವಿನ್ಯಾಸದ ಮಾಲೀಕರೇ ತಮ್ಮ ಸ್ವಂತ ಖರ್ಚಿನಿಂದ ಮಾಡಿಸಿಕೊಡಬೇಕು.
8. ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ವಿಧಿಸಿದ ಎಲ್ಲ ಶರತ್ತುಗಳಿಗೆ ಬದ್ಧರಾಗಿರಬೇಕು.
9. ಸದರ ವಿನ್ಯಾಸದಲ್ಲಿ ಸಿವ್ಹಿಲ್ ಕಾಮಗಾರಿಗಳನ್ನು ಮುಗಿಸಿದ್ದು, ಪ್ರತಿಶತ 80% ಮನೆಗಳು ಬರುವವರೆಗೆ ವಿನ್ಯಾಸದ ಮಾಲೀಕರು ತಮ್ಮ ಸ್ವಂತ ಖರ್ಚಿನಿಂದ ದುರಸ್ತಿ ಮಾಡಬೇಕು.
10. ಸದರ ವಿನ್ಯಾಸ ಹಸ್ತಾಂತರವಾದ ನಂತರ
11. ಯಾವುದೇ ತರಹದ-ಲೆಕ್ಕ ಪರಿಶೋಧಕರ ಅಕ್ಷೇಪಣೆಗಳು ಬಂದಲ್ಲಿ ಸದರ ಅಕ್ಷೇಪಣೆಗೆ ತಗಲಬಹುದಾದ ವೆಚ್ಚವನ್ನು ವಿನ್ಯಾಸದ ಮಾಲೀಕರೇ ಭರಿಸಬೇಕಾಗುತ್ತದೆ. ಈ ಬಗ್ಗೆ ಮುಚ್ಚಳಿಕೆ ಪತ್ರ ನೀಡಬೇಕು.
12. ಸದರಿ ವಿನ್ಯಾಸಕ್ಕೆ ಸಂಬಂಧಿಸಿದಂತೆ ಪರಿಶೋಧನಾ ಶುಲ್ಕ, ವಿದ್ಯುತ್ ಸಂಪರ್ಕ ಶುಲ್ಕ, ಘನತ್ಯಾಜ್ಯ ವಸ್ತು ನಿರ್ವಹಣಾ ಶುಲ್ಕ, ಟ್ರೀ ಹಾಗೂ ಟ್ರೀಗಾರ್ಡ ಶುಲ್ಕ, ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಜಲಮಂಡಳಿರವರು ತಿಳಿಸಿರುವಂತೆ ನೀರು ಬಳಕೆದಾರರಿಂದ ಪ್ರೋರೇಟಾ ಶುಲ್ಕ, ಇತರೆ ಶುಲ್ಕ/ಫೀ ಯನ್ನು ಪಾಲಿಕೆಯು ನಿಗದಿಪಡಿಸಿದ ಚಾಲ್ತಿ ಸಾಲಿನ ದರದಂತೆ ಭರಿಸಬೇಕಾಗುತ್ತದೆ.

ಆಯುಕ್ತರು 20/12/24

ಹುಬ್ಬಳ್ಳಿ – ಧಾರವಾಡ ಮಹಾನಗರ ಪಾಲಿಕೆ

ಧಾರವಾಡ. 20/12/2024

**ಪ್ರತಿಗಳು:-**

1. ಆಯುಕ್ತರು ಹು-ಧಾ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ ಇವರಿಗೆ ಅಭಿನಂದನೆಗಳೊಂದಿಗೆ ಮಾಹಿತಿಗಾಗಿ.
2. ಜಂಟಿ ಆಯುಕ್ತರು, ಹುಬ್ಬಳ್ಳಿ -ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ.
3. ಉಪ ನಿರ್ದೇಶಕರು, ನಗರ ಯೋಜನೆ ವಿಭಾಗ, ಹುಬ್ಬಳ್ಳಿ -ಧಾರವಾಡ ಮಹಾನಗರ ಪಾಲಿಕೆ ಧಾರವಾಡ ಇವರಿಗೆ ಮಾಹಿತಿಗಾಗಿ.
4. ಕಾರ್ಯನಿರ್ವಾಹಕ ಅಭಿಯಂತರರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಧಾರವಾಡ ಇವರಿಗೆ ಮಾಹಿತಿಗಾಗಿ.
5. ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ಜಲ ಮಂಡಳಿ (ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ) ಧಾರವಾಡ ಇವರಿಗೆ ಮಾಹಿತಿಗಾಗಿ.
6. ಕಾರ್ಯ ನಿರ್ವಾಹಕ ಅಭಿಯಂತರರು, ವಿದ್ಯುತ್ ವಿಭಾಗ, ಹುಬ್ಬಳ್ಳಿ -ಧಾರವಾಡ ಮಹಾನಗರ ಪಾಲಿಕೆ ಧಾರವಾಡ ಇವರಿಗೆ ಮಾಹಿತಿಗಾಗಿ.
7. ಸಹಾಯಕ ಆಯುಕ್ತರು, ವಲಯ ಕಚೇರಿ ಸಂಖ್ಯೆ 12 ಸದರಿ ವಸತಿ ವಿನ್ಯಾಸದಲ್ಲಿನ ಎಲ್ಲ ನಿವೇಶನಗಳಿಗೆ ಸಂಭಂದಪಟ್ಟ ಶುಲ್ಕವನ್ನು ಪಾವತಿಸಿಕೊಂಡ ನಂತರ ಖಾತೆಯನ್ನು ತೆರೆಯಲು ಹಾಗೂ ಮಾಹಿತಿಗಾಗಿ.
8. ಸಹಾಯಕ ನಿರ್ದೇಶಕರು ತೋಟಗಾರಿಕೆ ಇಲಾಖೆ, ಹು.ಧಾ.ಮ.ಪಾಲಿಕೆ, ಧಾರವಾಡ ಇವರಿಗೆ ಮಾಹಿತಿಗಾಗಿ.
9. ಶ್ರೀ ಜಹಾಂಗೀರ ಶೇಖ ತಂದೆ ನೋಹಾ ಶೇಖ, ಮಿಡಮ್ಯಾಕ್ ಡೆವಲಪರ್ಸ್, ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ.